# ವೈಭವೀಕರಣ ಬೇಗ ತಲುಪುತ್ತದೆ

## ದಿವ್ಯಾ

ಉದಯದ 'ಗೌರಿಪುರದ ಗಯ್ಯಾಳಿಗಳು' ಅನ್ನಪೂರ್ಣ



◆ **ಗಂಭೀರ ಪಾತ್ರದಿಂದ ಹಾಸ್ಯಕ್ಕೆ ಬದಲಾದಾಗ ಎದುರಾಗುವ ಸವಾಲುಗಳೇನು?**

ಇದುವರೆಗೂ ಗಂಭೀರ ಇಲ್ಲವೇ ಭಾವುಕ ಪಾತ್ರಗಳನ್ನೇ ನಿರ್ವಹಿಸಿದ್ದೇನೆ. ಇದೇ ಮೊದಲಬಾರಿಗೆ ಕಾಮಿಡಿ ಮಾಡುತ್ತಿದ್ದೇನೆ. ಗಂಭೀರ ಕಥೆಯ ಪಾತ್ರಗಳು ದೇಹ ಭಾಷೆಯನ್ನು ಪ್ರಧಾನವಾಗಿ ಬಯಸುವುದಿಲ್ಲ. ಹಾಸ್ಯದಲ್ಲಿ ದೇಹ ಭಾಷೆ ಅತಿ ಮುಖ್ಯ, ಅದರ ಜೊತೆ ಡೈಲಾಗ್ ಸರಿಯಾಗಿ ಬೆರೆತಿದ್ದರೆ ಮಾತ್ರ ಕಥೆಯ ಆಶಯವನ್ನು ಮುಟ್ಟಲು ಸಾಧ್ಯ. ಇಲ್ಲದಿದ್ದರೆ ಅದು ಅಭಾಸವಾಗುತ್ತದೆ. ಆರಂಭದಲ್ಲಿ ಇದನ್ನು ತಲೆಯಲ್ಲಿ ಇಟ್ಟುಕೊಂಡು ತುಂಬ ಜಾಗ್ರತೆಯಿಂದ ಅಭಿನಯ ಮಾಡುತ್ತಿದ್ದೆ. ಈಗ ಪೂರ್ಣ ಪ್ರಮಾಣದ ಹಾಸ್ಯ ನಟನೆಯನ್ನು ಮಾಡುತ್ತಿದ್ದೇನೆ. ಹಾಸ್ಯಾಭಿನಯ ಕಷ್ಟದ ಕೆಲಸ.

◆ **ನಟಿ ಆಗಿದ್ದು ಹೇಗೆ?**

ನಟಿ ಆಗಬೇಕು ಅಂತ ಅಂದುಕೊಂಡಿರಲಿಲ್ಲ. ಭಾರತೀಯ ಸೇನೆಯನ್ನು ಸೇರುವ ಆಸೆ ನನ್ನದಾಗಿತ್ತು. ಯಾವುದೋ ತಿರುವಿನಲ್ಲಿ ಇಲ್ಲಿ ಬಂದು ನಿಂತಿದ್ದೇನೆ ಅಷ್ಟೆ. ಡಿಗ್ರಿ ಮುಗಿದ ನಂತರ ಸೇನೆಗೆ ಸೇರುವ ಪ್ರಯತ್ನದಲ್ಲಿ ಇದ್ದಾಗಲೇ ಕಿರುತೆರೆಗೆ ಅವಕಾಶ ಸಿಕ್ಕಿತ್ತು. ಆಕಸ್ಮಿಕ ಅವಕಾಶ ಬಳಸಿದೆ, ಶಾಶ್ವತವಾಗಿ ನೆಲೆ ನಿಲ್ಲುವಂತೆ ಆಯ್ತು.

◆ **ಬಣ್ಣ ಹಚ್ಚಿದ ಮೊದಲ ದಿನಗಳನ್ನು ಇವತ್ತು ನೆನಪಿಸಿಕೊಂಡರೆ...**

ನಾನು ಎಂ.ಎನ್. ಲಕ್ಷ್ಮೀದೇವಿ ಅವರ ಮೊಮ್ಮಗಳು. ಅವರಿಂದ ಕೆಲಸದ ಬದ್ಧತೆಯನ್ನು ಕಲಿತಿದ್ದೇನೆ. ಈ ಕ್ಷೇತ್ರಕ್ಕೆ ಹೊಸದಾಗಿ ಬಂದಾಗ ಏನನ್ನು ಕಲಿತಿದ್ದೇನೋ ಅದು ಈಗಲೂ ಪ್ರಯೋಜನಕ್ಕೆ ಬರುತ್ತಿದೆ. ನಟಿಯಾಗಿ ಬೆಳೆಯಲು ಬೇಕಾಗುವ ತಾಂತ್ರಿಕ ಕೌಶಲ್ಯವನ್ನು ಗುಣಾತ್ಮಕವಾಗಿ ಬೆಳೆಸಿಕೊಳ್ಳುತ್ತಿದ್ದೇನೆ. ಮೊದಲಿಗೆ ಹೋಲಿಸಿದರೆ ಆತ್ಮವಿಶ್ವಾಸ ಹೆಚ್ಚಾಗಿದೆ. ನಟನೆ ಪ್ಯಾಶನ್, ಇಲ್ಲಿ ಕೆಲಸ ಮಾಡುವುದು ತುಂಬ ಇಷ್ಟವಾಗುತ್ತದೆ. ನನಗೆ ಜ್ವರ ಇರಲಿ, ತಲೆ ನೋವೇ ಇರಲಿ ಮೇಕಪ್ ಮಾಡಿಕೊಂಡು ಕ್ಯಾಮೆರಾ ಎದುರು ನಿಂತರೆ ಯಾವ ರೋಗವೂ ಕ್ಷಣ ನಿಲ್ಲುವುದಿಲ್ಲ. ಹುಷಾರಿಲ್ಲದ ನಾನು ನಟನೆ ಮಾಡಿದ ತಕ್ಷಣ ಹುಷಾರಾಗುತ್ತೇನೆ.

◆ **ನಟನೆ ನಿಮ್ಮ ಯೋಚನೆಯನ್ನು ಸಮಾಜಮುಖಿ ಮಾಡಿದೆಯಾ?**

ಪ್ರತಿ ಪಾತ್ರವು ಸಮಾಜದಲ್ಲಿ ಏನಾದರೂ ಪರಿಣಾಮವನ್ನು ಉಂಟು ಮಾಡಬೇಕು ಎಂದು ನಿರೀಕ್ಷಿಸುತ್ತೇನೆ. ನನ್ನ ಎಲ್ಲ ಪಾತ್ರಗಳಿಂದಲೂ ಕಲಿತಿದ್ದೇನೆ. ಅದನ್ನು ನನ್ನ ಜೀವನದಲ್ಲಿಯೂ ಅಳವಡಿಸಿಕೊಂಡಿದ್ದೇನೆ. ನೆಗೆಟಿವ್ ಪಾತ್ರ ಮಾಡಿದಾಗ ಅಲ್ಲಿನ ಪಾತ್ರದ ಕುತಂತ್ರದ ಪರಿಣಾಮವನ್ನು ತಿಳಿದುಕೊಳ್ಳುತ್ತೇನೆ. ಒಂದೊಂದು ಪಾತ್ರದಿಂದಲೂ ಕಲಿಯುತ್ತೇನೆ. ಪಾತ್ರದ ಮೂಲಕ ಏನಾದರೂ ಸಂದೇಶ ನೀಡಬೇಕು ಎಂದೇ ನಾನು ಬಯಸುತ್ತೇನೆ. ಸಮಾಜಕ್ಕೆ ಸಹಾಯ ಆಗದಿದ್ದರೂ ನನಗಂತೂ ಲಾಭವಾಗುತ್ತದೆ. ನಟಿಯಾಗಿ ತೆರೆಯಲ್ಲಿ ಹೇಳುವ ಒಂದೊಂದು ಡೈಲಾಗ್ ಕೂಡ ಸಮಾಜಮುಖಿಯಾಗಿಯೇ ಇರುತ್ತವೆ. ನಮ್ಮ ಒಂದು ಹೇಳಿಕೆ ಮತ್ತೊಬ್ಬರ ಭಾವನೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು. ಅಂತಹ ಯಾವುದಾದರೂ ಪದ ಬಳಕೆಯಾಗಿದ್ದರೆ ಅದನ್ನು ಬದಲು ಮಾಡಿಕೊಡಲು ಕೇಳಿಕೊಳ್ಳುತ್ತೇನೆ.

◆ **ಯಾವ ಪಾತ್ರವನ್ನು ಮಾಡಬೇಕು ಎನ್ನುವ ಆಸೆ ಉಳಿದಿದೆ?**

ಇನ್‌ಸ್ಪೆಕ್ಟರ್ ಪಾತ್ರ ಮಾಡಬೇಕು ಎನ್ನುವ ಆಸೆ. '...ಗಯ್ಯಾಳಿ'ಯ ಒಂದು ಕಂತಿನಲ್ಲಿ ಬಣ್ಣ ಹಚ್ಚಿದೆ. ಅದನ್ನು ನೋಡಿದ ಬಹುತೇಕರು ನನಗೆ ಪೊಲೀಸ್ ಇಲಾಖೆಗೆ ಸೇರಬೇಕಿತ್ತು ಎಂದು ಹೇಳಿದ್ದಾರೆ. ಈ ಧಾರಾವಾಹಿಯಲ್ಲಿ ಪುಟ್ಟ ಅವಕಾಶ ಸಿಕ್ಕಿದೆ. ಮುಂದೆ ದೀರ್ಘ ಅವಕಾಶ ಸಿಕ್ಕರೆ ಒಳ್ಳೆಯದು.

◆ **ನಟನೆಯ ಜೊತೆಗೆ ಬೇರೆ ಸಾಧ್ಯತೆಗಳ ಬಗ್ಗೆ ಯೋಚನೆ ಮಾಡಿದ್ದೀರಾ?**

ರಂಗಭೂಮಿ, ಕಿರುತೆರೆ ಮತ್ತು ಸಿನಿಮಾದಂತಹ ಕಲಾ ಮಾಧ್ಯಮಗಳು ಒಂದಕ್ಕೊಂದು ಆಂತರಿಕ ಸಂಬಂಧವನ್ನು ಬೆಸೆದುಕೊಂಡಿವೆ. ಸಿನಿಮಾಕ್ಕೆ ಅವಕಾಶ ಬರುತ್ತವೆ. ಆದರೆ ಇದನ್ನು ಬಿಟ್ಟು ಅಲ್ಲಿ ಹೋಗಲು ಆಗುವುದಿಲ್ಲ. ಹೀಗೆ ಏನೇನೋ ತಾಂತ್ರಿಕ ಸಮಸ್ಯೆಗಳು ಇರುತ್ತವೆ. ಹಾಗಾಗಿ ಸಿನಿಮಾ ಅವಕಾಶಗಳು ಸಿಕ್ಕರೂ ಮಾಡಲು ಸಾಧ್ಯ ಆಗಿಲ್ಲ. ಮುಂದಿನ ದಿನಗಳಲ್ಲಿ ಕತೆಯನ್ನು ಮಾಡಬೇಕು ಎನ್ನುವ ಯೋಚನೆ ಬಂದಿದೆ. ತೆರೆಯ ಹಿಂದೆಯೂ ಕೆಲಸ ಮಾಡಬೇಕು ಎಂದು ಅನಿಸಿದೆ.

◆ **ನೆಗೆಟಿವ್ ಪಾತ್ರ ತುಂಬ ಕ್ರೂರವಾಗಿರುತ್ತವೆ ಇದನ್ನು ನೋಡುವ ಒಬ್ಬ ವೀಕ್ಷಕಿಯಾಗಿ ಏನು ಹೇಳುತ್ತೀರಿ?**

ಪರಿಸ್ಥಿತಿ ಕೆಟ್ಟದಾಗಿ ಇರುತ್ತದೆ. ಪರಿಸ್ಥಿತಿಗೆ ತಕ್ಕಂತೆ ಪ್ರತಿಕ್ರಿಯೆ ಕಲೆಯಲ್ಲಿ ಮೂಡುತ್ತದೆ. ಸಣ್ಣ ಮಟ್ಟದಲ್ಲಿ ನಡೆದ ತಪ್ಪು ಒಪ್ಪುಗಳನ್ನು ವೈಭವೀಕರಿಸಿದರೆ ಜನರನ್ನು ಬೇಗ ತಲುಪುತ್ತದೆ. ಒಬ್ಬ ವೀಕ್ಷಕಿಯಾಗಿ ಇಂತಹ ಘಟನೆಗಳು ನಡೆಯಲು ಸಾಧ್ಯವೇ ಎಂದು ಅಚ್ಚರಿಯಾಗುತ್ತದೆ.

◆ **ಗಯ್ಯಾಳಿ ಎನ್ನುವುದೇ ನೆಗೆಟಿವ್ ಅಲ್ಲವೇ?**

ನನಗೆ ನೆಗೆಟಿವ್ ಅನ್ನಿಸಲಿಲ್ಲ. ಎಲ್ಲರಲ್ಲಿಯೂ ಗಯ್ಯಾಳಿತನ ಇರುತ್ತದೆ. ಚಿಕ್ಕ ಮಗೂ ಕೂಡ ತನ್ನ ಪ್ರತಿರೋಧವನ್ನು ಹಾಗೆಯೇ ತೋರಿಸುತ್ತದೆ. ಬಜಾರಿತನ ಹೆಣ್ಣುಮಕ್ಕಳಿಗೆ ಇದ್ದರೆ ಚಂದ ಕಾಣಿಸುತ್ತದೆ. 'ಗಯ್ಯಾಳಿ' ಸರಿಯಾದ ಪಾತ್ರ ಕೊಟ್ಟಿದ್ದಾರೆ ಎಂದು ಅನ್ನಿಸುತ್ತದೆ. ಅಪ್ಪ–ಅಮ್ಮ, ಅತ್ತೆ–ಮಾವ ಪ್ರಶಂಸಿಸಿದ್ದಾರೆ. ಸಹ ನಟರು ಕೂಡ ತುಂಬ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

■ **ರಾಘವೇಂದ್ರ ಕೆ.**